

ಬಿ. ಜನಾರ್ದನ ಭಟ್

ಕಲೆ: ವಿಶ್ವನಾಥ ಎ.ಎಸ್.

# ಇಸ್ತ್ರಿರಿ ಅಪ್ಪಣ್ಣನ ಡಾಲರ್ ಸೈಟ್

ಮಾಕಾಲ ಪಟ್ಟಣದ ಡಾಲರ್ ಹೆವೆನ್ ಬ್ಲಾಕ್ ಎಂಬ ಅತ್ಯಂತ ಶ್ರೀಮಂತರು ವಾಸಿಸುವ ರೆಸಿಡೆನ್ಶಿಯಲ್ ಏರಿಯಾದಲ್ಲಿ ಒಂದು ವಿಚಿತ್ರ ಸೈಟ್ ಇತ್ತು. ಎರಡು ವರ್ಷಗಳ ಹಿಂದಿನವರೆಗೂ ಅದು ಈ ಜನವಸತಿ ಕೇಂದ್ರದ ಕ್ಯಾನ್ಸರ್ ರೋಗದಂತೆ ಹಳೆಯ ಗಿಡಗಂಟಿಗಳು, ಕಸಕಡ್ಡಿಗಳು ಮತ್ತು ಮಣ್ಣಿನ ದಂಡೆಬೇಲಿ, ಗೆದ್ದಲು ಹಿಡಿದ ಮರದ ಗೂಟಗಳು ಇತ್ಯಾದಿಗಳ ಪಳೆಯುಳಿಕೆಗಳಿಂದ ಕೂಡಿ ವಿಚಿತ್ರವಾಗಿತ್ತು. ಶತಮಾನಗಳ ಹಿಂದಿನ ಗ್ರಾಮೀಣ ಬದುಕಿನ ತುಂಡೊಂದನ್ನು ಆಧುನಿಕ ಕಾಲಕ್ಕೆ ಕಾಲಯಂತ್ರದಲ್ಲಿ ತಂದು ಇರಿಸಿದಂತೆ ಅದು ಅಲ್ಲಿ ವಿಲಕ್ಷಣವಾಗಿ ಕಾಣಿಸುತ್ತಿತ್ತು. ಅಲ್ಲಿನ ಬೇರೆಲ್ಲಾ ಸೈಟುಗಳಲ್ಲಿ ಸ್ವರ್ಗದ ಹರ್ಮ್ಯಗಳನ್ನು ಹೋಲುವ ಬಂಗಲೆಗಳು ಎದ್ದುನಿಂತು ಝಗಝಗಿಸುತ್ತಾ, ಎದುರಿನ ರಸ್ತೆಗಳು ರತ್ನಗಂಬಳಿ ಹಾಸಿದಂತೆ ಲಕಲಕಿಸುತ್ತಾ ಇದ್ದಾಗ ಇದೊಂದು ಸೈಟ್ ಹಾಗೆಯೇ ಉಳಿದಿರಲು ಕಾರಣವೇನು ಎನ್ನುವುದೇ ಎಲ್ಲರಿಗೂ ವಿಸ್ಮಯ ಹುಟ್ಟಿಸುತ್ತಿದ್ದ ಸಂಗತಿಯಾಗಿತ್ತು. ಕದೊನಿ, ಕೊರ್ಲ ಮುಂತಾದ ದೊಡ್ಡದೊಡ್ಡ ಉದ್ಯಮಪತಿಗಳ ಏಜೆಂಟರು ಅದನ್ನು ಖರೀದಿಸಿ ಅದರಲ್ಲಿ ತಮ್ಮ ಗೆಸ್ಟ್ ಹೌಸ್ ಕಟ್ಟಿಸಲು ರಿಯಲ್ಟರ್‌ಗಳನ್ನು ವಿಚಾರಿಸಿದ್ದಿದೆ.

ಕೊನೆಗೂ ಆ ಜಾಗದ ಶಾಪ ವಿಮೋಚನೆ ಆಗಿ ಅದು ಮಾರಾಟ ಆಗಿಹೋಯಿತು. ಅದರಲ್ಲಿ ಕಲ್ಚರಲ್ ಸ್ಟಡೀಸ್ ಸೆಂಟರ್ ಸ್ಥಾಪನೆಗೆ ವಿದೇಶದ ಫೌಂಡೇಷನ್ ಒಂದು ಮುಂದೆ ಬಂದು, ಅದಕ್ಕಾಗಿ ಸುಂದರ ವಾಸ್ತು ವಿನ್ಯಾಸದ ಕಟ್ಟಡವೊಂದು ಎದ್ದು ನಿಂತಿದೆ. ಆ ಜಾಗ ಹಲವು ವರ್ಷಗಳ ಕಾಲ ಮಾರಾಟವಾಗದೆ ಹಾಗೆಯೇ ಉಳಿದಿರಲು ಅದರ ರೆಕಾರ್ಡ್ ಸಮಸ್ಯೆಯೇ ಕಾರಣವಾಗಿತ್ತು. ವದಂತಿಗಳನ್ನು ಕೇಳಿಕೊಂಡು ಕೆಲವರು ಅದು ಭೂತದ ಸಮಸ್ಯೆ ಇದ್ದ ಜಾಗ ಎಂದು ಕಾರಣವಿಲ್ಲದೆ ಅಪಪ್ರಚಾರ ಮಾಡುತ್ತಿದ್ದದ್ದೂ ಇದೆ. ಆ ಜಾಗದಲ್ಲಿದ್ದ ಇಸ್ತ್ರಿ ಅಪ್ಪಣ್ಣನ ಕುಟುಂಬಕ್ಕೆ ದೈವಭೂತಗಳ ಸಮಸ್ಯೆ ಏನಾದರೂ ಇತ್ತೇ ಎನ್ನುವುದು ತಿಳಿಯದು; ಆದರೆ ಜಾಗ ಮಾತ್ರ ಚಿನ್ನದಂತಹ ಜಾಗವಾಗಿತ್ತು.

ಇಸ್ತ್ರಿ ಅಪ್ಪಣ್ಣನ ಕಾಲ ಮುಗಿದು ಎರಡು ದಶಕಗಳ ನಂತರ ತಾನು ಅವನ ಮೊಮ್ಮಗ, ಜಾಗದ ವಾರಸುದಾರ ಎಂದು ಹೇಳಿಕೊಂಡು ಬಂದ ಕಾಟಿಪಳ್ಳ ಶೀನ (ಶ್ರೀನಿವಾಸ) ಎಂಬುವನು, ಜಾಗವನ್ನು ಮಾರಾಟ ಮಾಡಲಿಕ್ಕಾಗಿ ಇನ್ನಿಲ್ಲದಂತೆ ಪ್ರಯತ್ನ ಪಡುತ್ತಿದ್ದ. ಪ್ರತಿನಿತ್ಯ ಎಂಬಂತೆ ಕಾಟಿಪಳ್ಳದಿಂದ ಮಾಕಾಲ ಪಟ್ಟಣಕ್ಕೆ ಬಂದು ರೆಕಾರ್ಡುಗಳನ್ನು ತಿದ್ದಿಸಿ, ಅದರ ಮೂಲ ಯಜಮಾನ ಎಂದು ರೆಕಾರ್ಡ್‌ಗಳಲ್ಲಿ ದಾಖಲಾಗಿದ್ದ 'ಬಾರಕಳಿಯ